Undergrished Drainage system in Hubli-Dharwad

438 (859) Shri Jagadish Shettar (Hubli).- Will the Hon'ble Minister for Urban Development be pleased to State.

1) Whether it has come to the notice of the Government that 50% of the residents of Hubli-Dharwad Corporation are facing problems without having proper Under Ground Drainage system?

2) What steps are being taken by the Government to setright the Under Ground Drainage system in the City.

Shri B.N. Bachegowda (Minister for Urban Development)

1. Yes.

2. A Project to provide under ground Drainage to uncovered areas is under preparation. It is proposed to get a feasibility report of the project from the consultants for posing it to external financial assistance.

ಕೊಪ್ಪಳ ಪುರಸಭೆಗೆ ಐ.ಡಿ.ಎಸ್.ಎಂ.ಟಿ. ಯಲ್ಲಿ ನೀಡಿರುವ ಹಣ

439 (664) ಶ್ರೀ ಕರಡಿ ಸಂಗಣ್ಣ (ಕೊಪ್ಪಳ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ಪುರಸಭೆಗೆ ಐ.ಡಿ.ಎಸ್.ಎಂ.ಟಿ. ಮತಿಯಿಂದ ಇದುವರೆಗೆ ಒದಗಿಸಿದ ಅನುದಾನವೆಷ್ಟು?

ಆ) ಈವರೆಗೆ ಯಾವ ಯಾವ ಕಾಮಗಾರಿಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ? (ವಿವರಗಳನ್ನು ಒದಗಿಸುವುದು).

ಇ) ಈ ಕಾಮಗಾರಿಗಳು ಯಾವ ಯಾವ ಹಂತದಲ್ಲಿವೆ? (ವಿವರ ನೀಡುವುದು)

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) ರೂ. 21.66 ಲಕ್ಷಗಳು.

ಆ) ಯಾವುದೇ ಅನುದಾನವನ್ನು ಈವರೆಗೆ ಉಪಯೋಗಿಸಿರುವುದಿಲ್ಲ. (ಇತ್ತೀಚೆಗೆ ಅನುದಾನ ಬಿಡುಗಡೆಯಾಗಿದೆ).

ಇ) ಮೇಲಿನ ಉತ್ತರ (ಅ) ದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ವಸತಿ ಗೃಹಗಳ ಬಗ್ಗೆ

441 (332) ಡಾ॥ ಎಂ.ಪಿ. ಕರ್ಕಿ (ಕುಮಟಾ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲ್ಪಡುವ ವಸತಿ ಗೃಹಗಳೆಷ್ಟು; ಹಿಂದುಳಿದ, ಪರಿಶಿಷ್ಟ ವರ್ಗ ಪರಿಶಿಷ್ಟ ಜಾತಿ ಪದವಿಪೂರ್ವ, ಮೆಟ್ರಿಕ್ ಪೂರ್ವ (ಜಿಲ್ಲಾವಾರು ವಿಧಾನಸಭಾ ಕ್ಷೇತ್ರ ದನ್ವಯ ವಿಂಗಡಿಸಿ ವಿವರ ಕೊಡುವುದು;

ಶ್ರೀ ಕೆ.ಎಂ. ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು)

ಅ) ಉತ್ತರ ಕನ್ನಡ ಜಿಲೆಯಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗಾಗಿ ಒಟ್ಟು 27 ಮೆಟ್ರಿಕ್ ಪೂರ್ವ, ವಿದ್ಯಾರ್ಥಿನಿಲಯಗಳನ್ನು ಹಾಗೂ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ವತಿಯಿಂದ 52 ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು ಮತ್ತು 9 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಜಿಲ್ಲಾವಾರು ಮತ್ತು ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು.		ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯಗಳು.	
		ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
1.	ಕಾರವಾರ	3	-	9	2
2.	ಅಂಕೋಲ	5	-	10	2
3.	ಕುಮಟಾ	1	-	5	1
4.	ಭಟ್ಕಳ	2	-	9	4
5.	ಸಿರಸಿ	6	-	10	-
6.	ಹಳಿಯಾಳ	7	-	9	-